(ಶ್ರೀ ಎಸ್. ಎಂ. ಯಾಹ್ಯಾ)

ಕೂಲಿ 3-60 ರಿಂದ 4-50ರ ವರೆಗೆ ಇರಬೇಕು ಎಂಬುದನ್ನು ಕನ್‌ಸಿಡರ್ ಮಾಡಬೇಕೆಂದಿದ್ದೇವೆ. ಯಾರ್ಯಾರಿಗೆಷ್ಟೆಷ್ಟು ಎಂಬುದನ್ನು ಇನ್ನೂ ನಿಗದಿ ಮಾಡ ಬೇಕಾಗಿದೆ. For Stone carriers including loaders Rs. 3-60 is the minimum. For workers engaged in stone crushing and rubble making the minimum wages are *Rs.* 3-75 and for size makers etc., *Rs.* 4-50.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್;- ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಆ ಕಮಿಟಿಯಲ್ಲಿ ಯಾವ್ಯಾವ ಸದಸ್ಯರು ಇದ್ದಾರೆ : ಎಲ್ಲೋ ಡೆಲ್ಲಿಯಲ್ಲಿ ಕೂತು ಈ ಬಗ್ಗೆ ಚರ್ಚೆಮಾಡುವುದರಿಂದೇನೂ ಪ್ರಯೋಜನವಾ ಗುವುದಿಲ್ಲ. ಬೆಂಗಳೂರಿನಲ್ಲಿ ಕೂತು ಚರ್ಚೆಮಾಡಬೇಕು. ಕಮಿಟಿಯ ಕೆಲಸ ಕಾರ್ಯಗಳು ಚೆನಾಗಿ ಕಾರ್ಯಗತವಾಗಬೇಕಾದರೆ ವರ್ಕರ್ಸ್ ಪರವಾಗಿ ಒಬ್ಬರು ಮ್ಯಾನೇಜ್‌ಮೆಂಟ್ ಪರವಾಗಿ ಒಬ್ಬರು ಅಲ್ಲಿ ಇರಬೇಕು. ಹಾಗಾದರೆ ಆ ಕಮಿ ಟಿಯಲ್ಲಿ ಒಂದು ಸರಿಯಾದ ತೀರ್ಮಾನವಾಗುವುದಕ್ಕೆ ಸಹಕಾರಿಯಾಗುತ್ತದೆ. ಹಾಗೆ ಮಾಡದೆ ಅರ್ಬಿಟ್ರರಿಯಾಗಿ ಅಫಿಷಿಯಲ್ಸ್‌ನ್ನು ಮಾತ್ರ ಅಲ್ಲಿಗೆ ಹಾಕಿ ದ್ದೀರಿ. ಆ ಕಮಿಟಿಯ ಸದಸ್ಯರುಗಳು ಯಾರು ?

ಶ್ರೀ ಎಸ್. ಎಂ. ಯಾಹ್ಯಾ :- ಆ ಕಮಿಟಿಯಲ್ಲಿ ಈಗಾಗಲೇ ಲೇಬರ್ ರೆಪ್ರಸೆಂಟ್‌ಟಿವ್ಸ್ ಮತ್ತು ಮ್ಯಾನೇಜ್‌ಮೆಂಟ್ ರೆಪ್ರಸೆಂಟ್‌ಟಿವ್ಸ್ ಎಲ್ಲರೂ ಇದ್ದಾರೆ

SRI MALLIKARJUN KHARGE :— At present in Arkera Quarry in Gurumutkal Constituency the ladies are getting Rs. 1.16 per day and the male workers are getting Rs. 2.50 per day. I want to know whether the Government will enhance these wages to these quarry workers ?

SRI S. M. YAHYA :—In fact in Arkera there are 211 workers out of which 188 are working on contract basis. On an average they are getting Rs. 3 to Rs. 5.

LAND GRANTED NEAR SHIMOGA TO A SUGAR FACTORY

72. SRI HANJI SHIVANNA (Tarikere).

Will the Minister for Revenue be pleased to State :—

(*a*) the extent of land granted by the Government to the Sugar Factory near Shimoga and when it was granted and the period of its grant ;

(*b*) the purpose for which and the name of the person to whom the land was granted ;

(*c*) whether the name of the grantee Company has recently been changed ?

SRI N. HUTCHAMASTHY GOWDA (Minister for Revenue):

(*a*)—

Shimoga Taluk	*Acres*	*Guntas*	*S. Nos.*
(i) Hasoodi	315	00	135 *
(ii) Halalakkavali	150	00	20
Bhadravathi Taluk			
Karehalli	290	00	8
Karehalli	170	00	22 **
Yerehalli	346	06	13 ***
Kenchenahalli	214	00	11 ****

* Initially granted 250-00 acres and later on increased to 315 acres as per G. O. No RD 72 LGS 57 dated 2-5-1959.

** Out of this 100 acres of land has been resumed and granted to local people for cultivation.

*** Cancelled as per High Court Order No. WP 955/57.

**** The Sugar Company has not taken over the land as the same was irrigated one and was under unauthorised cultivation.

The land was granted on 30 years lease *vide* G. O. No. RD 72 LGS 1957 dated 30-8-1957 and 2-5-1959.

(SRI N. HUTCHAMASTHY GOWDA)

(*b*) To M/s. Tungabhadra Sugar Works for graving sugarcane (Production of Sugar).

(*c*) The name of the Company granted earlier ;

M/s. Tungabhadra Sugar Works Private Ltd., Shimoga.

It is learnt that the present name of the company is M/s. Mukesh Textile Mills Ltd.

ಶ್ರೀ ಹಂಜಿ ಶಿವಣ್ಣ.– ತುಂಗಭದ್ರ ಷುಗರ್ ವರ್ಕ್ಸ್‌ಗೆ ಒಟ್ಟು ಎಷ್ಟು ಎಕರೆ ಜಮೀನು ಕೊಟ್ಟಿದೆಯೆಂದು ಪ್ರಶ್ನೆ ಕೇಳಿದ್ದಕ್ಕೆ ಇದರಲ್ಲಿ ಚಿಲ್ಲರೆ, ಚಿಲ್ಲರೆ ಎಲ್ಲೆಲ್ಲಿ ಎಷ್ಟೆಷ್ಟು ಎಕರೆ ಜಮೀನನ್ನು ಕೊಟ್ಟಿದೆಯೆಂಬುದನ್ನು ತೋರಿಸುತ್ತಿದ್ದೀರಿ. ಇದರಲ್ಲಿ ನೀರಾವರಿ ಪ್ರದೇಶ ಒಟ್ಟು ಎಷ್ಟು ಎಕರೆ ಇದೆ ?

‡ ಶ್ರೀ ಎನ್. ಹುಚ್ಚಮಾಸ್ತಿಗೌಡ.—ಲೆಕ್ಕದಲ್ಲಿ ಕೊಟ್ಟಿರುವ ಹಾಗೆ 825 ಎಕರೆ ಮಾತ್ರ ಈಗ ಅವರ ಸ್ವಾಧೀನದಲ್ಲಿದೆ.

ಶ್ರೀ ಹಂಜಿ ಶಿವಣ್ಣ.– ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ 3 ಸಾವಿರ ಎಕರೆಗೆ ಮೇಲ್ಪಟ್ಟು ಇರತಕ್ಕ ಜಮೀನನ್ನು ತುಂಗಭದ್ರ ಷುಗರ್ ಕಂಪೆನಿಗೆ ಕಬ್ಬು ಬೆಳೆಯುವುದಕ್ಕೆ ಕೊಟ್ಟಿದ್ದೀರಿ. ಈಗ ಮುಖೇಶ ಟೆಕ್ಸ್‌ಟೈಲ್ಸ್ ಮಿಲ್ಸ್ ಲಿಮಿಟೆಡ್ ಅವರಿಗೆ ಕೊಟ್ಟಿದೆಯೆಂದು ಹೇಳಿದ್ದೀರಿ. ಅವರನ್ನು ಏಕೆ ಈಗ ಬಿಡಿಸಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಇದರ ಬಗ್ಗೆ ವಿವರಗಳನ್ನು ಪೂರಾ ಕೊಟ್ಟಿದ್ದೇನೆ. ಇದರಲ್ಲಿ ಒಟ್ಟು 825 ಎಕರೆಗಳು ಹಂಚಿಕೆಯಾಗಿದೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕಾರೇಹಳ್ಳಿಯಲ್ಲಿ 170 ಎಕರೆ ಪೈಕಿ 10) ಎಕರೆ ಗಳನ್ನು ವಾಪಸ್ಸು ತೆಗೆದುಕೊಂಡಿದೆ. ಹೈಕೋರ್ಟಿನ ಆರ್ಡರ್ ಪ್ರಕಾರ 3-6 ಎಕರೆ 6 ಗುಂಟೆಯಷ್ಟು ಎರೇಹಳ್ಳಿ ಜಮೀನು ರದ್ದಾಗಿದೆ. ಕೆಂಜೇನಹಳ್ಳಿಗೆ ಸೇರಿದ 214 ಎಕರೆಯಷ್ಟು ಜಮೀನು ಸಕ್ಕರೆ ಕಂಪೆನಿಗೆ ಸಿಗಲಿಲ್ಲ.

ಶ್ರೀ ಹಂಜಿ ಶಿವಣ್ಣ.—ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಂದ ಒಟ್ಟು ಎಷ್ಟು ಜಮೀನು ಸರ್ಕಾರ ಕೊಟ್ಟಿದೆ ? ಅದನ್ನು ಕಂಪೆನಿಗೆ ಯಾವ ಉದ್ದೇಶಕ್ಕಾಗಿ ಕೊಟ್ಟಿದೆಯೋ ಆ ಉದ್ದೇಶ ಸಾಧನೆಯಾಗಿದೆಯೇ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಟ್ಟು ಜಮೀನು ಕೊಟ್ಟಿರುವುದನ್ನು ನಾನು ಈಗಾಗಲೇ ತಿಳಿಸಿದ್ದೇನೆ. ಅವರಿಗೆ ಕಬ್ಬು ಬೆಳೆಯುವ ಉದ್ದೇಶಕ್ಕೋಸ್ಕರ ಕೊಟ್ಟಿರುವುದು. ಅವನ್ನು ಕಬ್ಬು ಬೆಳೆಯುವ ಉದ್ದೇಶಕ್ಕೇ ಕೊಟ್ಟಿರಲಿ, ಅಥವಾ ಬತ್ತ ಬೆಳೆಯುವ ಉದ್ದೇಶಕ್ಕೇ ಕೊಟ್ಟಿರಲಿ, ನಿನ್ನೆಯಿಂದಲೇ ಭೂಸುಧಾರಣೆ ಜಾರಿಗೆ ಬರುತ್ತಿದೆ. ಸಕ್ಕರೆ ಕಾರ್ಖಾನೆಗೆ ಕೇವಲ 50 ಯೂನಿಟ್‌ಗಳಷ್ಟು ಜಮೀನನ್ನು ಕೊಡಬೇಕೆಂದು ಅದರಲ್ಲಿದೆ. ಒಂದುವೇಳೆ ಹೆಚ್ಚಿಗೆ ಜಮೀನು ಅವರು ಪಡೆದಿದ್ದರೆ ಅದು ಸರ್ಕಾರದ ವಶಕ್ಕೆ ಬರುತ್ತದೆ.

ಶ್ರೀ ಹಂಜಿ ಶಿವಣ್ಣ.—ತೆಗೆದುಕೊಂಡಿರುವ ಉದ್ದೇಶವೇ ಬೇರೆ, ಅದನ್ನು ಈಗ ಉಪಯೋಗ ಮಾಡುತ್ತಿರುವ ಉದ್ದೇಶವೇ ಬೇರೆ. ಅಂಥಾದ್ದನ್ನು ತುಂಗಭದ್ರಾ ಷುಗರ್ ಕಂಪೆನಿಗೆ ಕೊಟ್ಟಿದ್ದರು. ಅದರ ಒಂದು ಲಾಭವನ್ನು ಬೊಂಬಾಯಿನ ಮುಖೇಶ ಟೆಕ್ಸ್‌ಟೈಲ್ಸ್ ಮಿಲ್ಸ್ ಲಿಮಿಟೆಡ್ ಅವರು ತೆಗೆದುಕೊಂಡು ಹೋಗುತ್ತಿದ್ದಾರೆಂಬುದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಯಾವ ಒಂದು ಉದ್ದೇಶಕ್ಕಾಗಿ ಭೂಮಿಯನ್ನು ತೆಗೆದುಕೊಂಡು ಹೋಗಿದ್ದರೋ ಆ ಒಂದು ಉದ್ದೇಶಕ್ಕಾಗಿ ಅದನ್ನು ಉಪಯೋಗಿಸದೇ ಇದ್ದರೆ ಅಂತಹ ಜಮೀನನ್ನು ಸರ್ಕಾರ ತೆಗೆದು ಕೊಳ್ಳುವುದಕ್ಕೆ ಬರುತ್ತದೆ. ಮಾನ್ಯ ಸದಸ್ಯರು ಈಗ ಅವರು ಆ ಒಂದು ಉದ್ದೇಶಕ್ಕಾಗಿ ಅವರು ಉಪಯೋಗಿಸುತ್ತಾ ಇಲ್ಲವೆಂದು ಹೇಳುತ್ತಿರುವುದರಿಂದ ಅದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ ತಾನೇ ಮಾನ್ಯ ಸಚಿವರು ಅಲ್ಲಿ ಕೆಲವು ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡಲಾಗುತ್ತಿದೆ ಎಂದು ಹೇಳಿದರು. ಹಾಗೆ ಅಲ್ಲಿ ಅಕ್ರಮ ಸಾಗುವಳಿ ಮಾಡತಕ್ಕ ಜನರೇನು ದೊಡ್ಡ ದೊಡ್ಡ ಭೂಮಾಲೀಕರೋ ಅಥವಾ ಸಣ್ಣ ಪುಟ್ಟ ರೈತರೋ ಅಥವಾ ಭೂಹೀನರೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಯಾರ ವಶದಲ್ಲಿದ್ದರೂ ಅದನ್ನು ಸರ್ಕಾರ ತಮ್ಮ ಸುಪರ್ದು ತೆಗೆದುಕೊಳ್ಳುತ್ತದೆ. ಆ ಅಕ್ರಮ ಸಾಗುವಳಿಯ ಭೂಮಿಯನ್ನು ಖಾಯಂ ಮಾಡುವುದಕ್ಕೂ ಕೆಲವು ಕ್ರಮಗಳಿವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಹಿಂದೆ ಆ ಜಮೀನನ್ನು ಕಬ್ಬು ಬೆಳೆಯುವುದಕ್ಕಾಗಿ ಸಕ್ಕರೆ ಕಂಪೆನಿಗೆ ಕೊಟ್ಟಿತ್ತು. ಅದನ್ನು ಈಗ ಅವರು ಮುಖೇನ್

(ಶ್ರಿ ಎಂ. ಎಸ್. ಕೃಷ್ಣನ್)

ಟೆಕ್ಸ್‌ಟೈಲ್ಸ್ — ಮುಂಬೈ ಇವರಿಗೆ ವರ್ಗಾಯಿಸಿದ್ದರೆ, ಹಾಗೆ ಅವನ್ನು ವರ್ಗಾಯಿಸಲು ಸರ್ಕಾರ ಅನುಮತಿ ಕೊಟ್ಟಿದೆಯೇ ? ಅಥವಾ ಅದೇನು ಒಂದು ಹೊಸ ಕಂಪೆನಿಯೇ ? ಹೊಸ ಕಂಪೆನಿಯಾಗಿದ್ದರೆ ಅದಕ್ಕೆ ಸರ್ಕಾರದ ಪರವಾನಿಗೆ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ — ಹೆಸರು ಬದಲಾವಣೆಯಿಂದ ಅವರ ಹಕ್ಕು ಹೋಗುವುದಿಲ್ಲ. ಆದರೆ ಭೂಮಿಯನ್ನು ಯಾವ ಉದ್ದೇಶಕ್ಕೆ ಕೊಡಲಾಗಿತ್ತೊ ಆದನ್ನು ಮಾರಿ ಬೇರೆ ಕಾರ್ಯಕ್ಕೆ ಅದನ್ನು ಬಳಸಿದ್ದರೆ, ಅದನ್ನು ವಿಚಾರ ಮಾಡಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎನ್. ಜಿ. ಹಾಲಪ್ಪ — ಅವರ ಹೆಸರಿನಲ್ಲಿ ಈ ದಿವಸ ಸರ್ಕಾರದವರೇನು ಜಮೀನಿದೆ ಎಂದು ಹೇಳುತ್ತಿದ್ದಾರೆ ಅದು ನಂಬತಕ್ಕ ವಿಷಯವಲ್ಲ. ಅವರ ಸ್ವಾಧೀನದಲ್ಲಿ ಈ ದಿವಸ 3 ಸಾವಿರ ಎಕರೆ ಇದೆ. ಅಧಿಕಾರಿಗಳು ತಪ್ಪು ಅಂಕೀ ಅಂಶಗಳನ್ನು ಕೊಟ್ಟಿದ್ದಾರೆ. ಅವರ ಸ್ವಾಧೀನದಲ್ಲಿರತಕ್ಕ ಆಕ್ರಮ ಭೂಮಿ ವಿಚಾರದಲ್ಲಿ ಸರ್ಕಾರದವರು ಇಲ್ಲಿಯವರೆಗೆ ಟಿ ಟಿ. ಹಾಕಿ ವಸೂಲ್ಮಾಡಿದ್ದಾರೆಯೇ? ಮತ್ತು ಆ ಅಕ್ರಮ ಭೂಮಿಯನ್ನು ಯಾವಾಗ ಬಿಡಿಸಿಕೊಳ್ಳುತ್ತಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಇದೇ ವಿಚಾರ ಇದೇ ಸಭೆಯಲ್ಲಿ ಅನೇಕಾವರ್ತಿ ಚರ್ಚೆಗೆ ಬಂದಿದೆ. ಈಗ ಇಲ್ಲಿ ಸದಸ್ಯರು ಹೇಳುತ್ತಿರುವಂತೆ ಅಲ್ಲಿ ಅಕ್ರಮ ಭೂಮಿ ಅವರ ವಶದಲ್ಲಿದ್ದರೆ ನಾನೇ ಈ ಅಧಿವೇಶನ ಮುಗಿದ ನಂತರ ಸ್ಥಳಕ್ಕೆ ಹೋಗಿ ಅಲ್ಲಿ ಸಂಬಂಧಪಟ್ಟವರನ್ನೆಲ್ಲಾ ಇಟ್ಟುಕೊಂಡು ಈ ಮ್ಯಾನ್ಯ ಸದಸ್ಯರನ್ನೂ ಹತ್ತಿರ ಇಟ್ಟುಕೊಂಡು ಇದನ್ನು ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹಂಜಿ ಶಿವಣ್ಣ. ಅಧಿಕಾರಿಗಳು ಈ ವಿಚಾರದಲ್ಲಿ ತಪ್ಪು ಅಂಕೀ ಅಂಗಳನ್ನು ಕೊಟ್ಟಿದ್ದಾರೆ ಎಂದು ಸಾಬೀತಾದರೆ ಅವರ ಬಗ್ಗೆ ಶಿಸ್ತಿನ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ. ತಪ್ಪು ಅಂಕೀ ಅಂಶಗಳನ್ನು ಕೊಟ್ಟಿದ್ದರೆ ಅವರ ಮೇಲೆ ಖಂಡಿತವಾಗಿಯೂ ಶಿಸ್ತಿನ ಕ್ರಮ ಕೈಗೊಳ್ಳುತ್ತೇವೆ.

MADAM SPEAKER.-- Question No. 309 and 442 may be taken up together.